6. ಆಯ್ಕೆಯನ್ನು ಐ.ಟಿ.ಐ/ಐ.ಟಿ.ಸಿ ಯಲ್ಲಿ ಗಳಿಸಿರುವ ಅಂಕ ಮತ್ತು ಸಹನಾಶಕ್ತಿಯ ಪರೀಕ್ಷೆಯಲ್ಲಿ ಗಳಿಸಿರುವ ಅಂಕಗಳ ಅನುಪಾತ 85:15 ಆಧಾರದ ಮೇಲೆ ರೋಸ್ಟರ್‌ನ್ನು ಪಾಲಿಸಿ ಮಾಡಲಾಗಿರುತ್ತದೆ. ಸಹನಾಶಕ್ತಿ ಪರೀಕ್ಷೆಗೆ ವಿವಿಧ ಜಾತಿ/ವರ್ಗ/ಪ್ರವರ್ಗಗಳಿಗೆ ಸೇರಿದ ಅಭ್ಯರ್ಥಿಗಳನ್ನು ಅರ್ಹತೆಯ ಆಧಾರದ ಮೇಲೆ 1:5ರ ಅನುಪಾತದಲ್ಲಿ ಕರೆಯಲಾಗಿರುತ್ತದೆ.

ಇ. ಒಟ್ಟು 14,307 ಅಭ್ಯರ್ಥಿಗಳು ಸದರಿ ಹುದ್ದೆಗಳಿಗೆ ಅರ್ಜಿಯನ್ನು ಸಲ್ಲಿಸಿದ್ದರು.

ಈ. ದಕ್ಷಿಣ ಕನ್ನಡ ಜಿಲ್ಲೆಯಿಂದ 138 ಮತ್ತು ಉಡುಪಿ ಜಿಲ್ಲೆಯಿಂದ 26 ಅಭ್ಯಥಿಗಳನ್ನು ಸಹನಾ ಶಕ್ತಿ ಪರೀಕ್ಷೆಗೆ ಕರೆಯಲಾಗಿತ್ತು. ಅದರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ 102 ಮತ್ತು ಉಡುಪಿ ಜಿಲ್ಲೆಯ 19 ಅಭ್ಯರ್ಥಿಗಳು ಆಯ್ಕೆಗೊಂಡಿರುತ್ತಾರೆ.

ಉ.ಊ.ಇ. ಕ.ವಿ.ಮಂಡಳಿ ನೌಕರಿ ಭರ್ತಿ ಹಾಗೂ ಬಡ್ತಿ ನಿಯಮಾವಳಿಯಲ್ಲಿ ಜಿಲ್ಲಾವಾರು ನೇಮಕಾತಿಯನ್ನು ಮಾಡಬೇಕೆಂಬ ನಿಯಮವಿರುವುದಿಲ್ಲ ಆದ್ದರಿಂದ, ಉದ್ಯೋಗ ಪ್ರಕಟಣೆಯಲ್ಲಿ ಮೆಸ್ಕಾ ವ್ಯಾಪ್ತಿಯಲ್ಲಿನ ಜಿಲ್ಲೆಗಳಲ್ಲಿನ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಬೇಕೆಂಬ ಷರತ್ತನ್ನು ವಿಧಿಸಿರುವುದಿಲ್ಲ. ರಾಜ್ಯದಲ್ಲಿನ ಇತರೆ ಜಿಲ್ಲೆಗಳಲ್ಲಿನ ಅರ್ಹ ಅಭ್ಯರ್ಥಿಗಳ ಅರ್ಜಿ ಸಲ್ಲಿಸಿರುತ್ತಾರೆ ಹಾಗೂ ಆಯ್ಕೆಯಾಗಿರುತ್ತಾರೆ. ಇಂತಹ ಅಭ್ಯಥಿಗಳ ಮೇಲೆ ಕ್ರಮ ಕೈಗೊಳ್ಳುವ ಅವಶ್ಯಕತೆ ಇರುವುದಿಲ್ಲ.

218 (289): ಶ್ರೀ ಕೃಷ್ಣಪಾಲೇಮಾರ್ ಜೆ. (ಸುರತ್ಕಲ್)

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಸನ್ಮಾನ್ಯ ಮುಖ್ಯಮಂತ್ರಿಗಳು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. ಸರ್.ಎಂ. ವಿಶ್ವೇಶ್ವರಯ್ಯನವರು ಜೀವಿಸಿದ್ದ ಮನೆಯು ಯಾರ ವಶದಲ್ಲಿದೆ.

ಆ. ಅದು ಎಷ್ಟು ಹಳೆಯ ಕಟ್ಟಡ ಎಂದು ಅಂದಾಜಿಸಲಾಗಿದೆಯೇ;

ಇ. ಅದರ ಸಂರಕ್ಷಣೆಗಾಗಿ ಸರ್ಕಾರದವರು ಕೈಗೊಂಡ ಕ್ರಮಗಳೇನು;

ಈ. ಸ್ಥಳೀಯ ಗ್ರಾಮ ಪಂಚಾಯಿತಿಯ ನಿರುಪಯೋಗಿ ಸಾಮಾನುಗಳನ್ನು ಈ ಮನೆಯಲ್ಲಿ ತುಂಬಿಸಿಟ್ಟು ಉಗ್ರಾಣವನ್ನಾಗಿ ಮಾಡಿರುವ ವಿಷಯವನ್ನು ಸರ್ಕಾರದ ಗಮನಿಸಿದೆಯೇ;

ಉ. ಆ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು;

ಊ. ಗಣಿತ ಸೂತ್ರ ಮತ್ತು ಕಟ್ಟಡ ತಾಂತ್ರಿಕ ವಿಜ್ಞಾನಗಳ ಪುಸ್ತಕ ಭಂಡಾರವಾಗಿದ್ದ ಭಾರತ ರತ್ನ ಸರ್ ಎಂ ವಿಶ್ವೇಶ್ವರಯ್ಯರವರ ಈ ವಿಶ್ವಕಂಠೀರವವನ್ನು ಸರಕಾರದವರು ಸಂರಕ್ಷಿಸಿ ರಾಷ್ಟ್ರೀಯ ಸ್ಮಾರಕವಾಗಿ ಪರಿವರ್ತಿಸಲು ಸಕಾಲಿಕ ಕ್ರಮವನ್ನು ಜರುಗಿಸಲು ಮುಂದಾಗುವರೆ;

ಋ. ಆ ಕುರಿತು ಸರ್ಕಾರದ ಕ್ರಮಗಳೇನು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಸನ್ಮಾನ್ಯ ಮುಖ್ಯಮಂತ್ರಿಗಳು)

ಅ. ಕೋಲಾರ ಜಿಲ್ಲೆ ಚಿಕ್ಕಬಳ್ಳಾಪುರ ತಾಲ್ಲೂಕು ಮುದ್ದೇನಹಳ್ಳಿಯಲ್ಲಿ ಸರ್ ಎಂ.ವಿಶ್ವೇಶ್ವರಯ್ಯನವರು ಜೀವಿಸಿದ್ದ ಮನೆಯು ಪ್ರಸಕ್ತ ವಿಶ್ವೇಶ್ವರಯ್ಯ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ಸುಪರ್ದಿನಲ್ಲಿರುತ್ತದೆ.

ಆ. ಸರ್.ಎಂ.ವಿಶ್ವೇಶ್ವರಯ್ಯರವರು ಜನಿಸಿದ ಮನೆಯು ಸುಮಾರು 1860ರಲ್ಲಿ ಕಟ್ಟಲ್ಪಟ್ಟಿರುತ್ತದೆ.

ಇ. ಸದರಿ ಕಟ್ಟಡವು ಪ್ರಸಕ್ತ ವಿಶ್ವೇಶ್ವರಯ್ಯ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ಸುಪರ್ದಿಯಲ್ಲಿರುವುದರಿಂದ ಸರ್ಕಾರವು ಈ ಕಟ್ಟಡದ ಸಂರಕ್ಷಣೆಗೆ ಕ್ರಮ ತೆಗೆದುಕೊಂಡಿರುವುದಿಲ್ಲ. ಸರ್ ಎಂ. ವಿಶ್ವೇಶ್ವರಯ್ಯನವರ ಸೋದರ ಸಂಬಂಧಿಯವರು ಈ ಟ್ರಸ್ಟಿನ ಅಧ್ಯಕ್ಷರಾಗಿರುವರು. ಇವರು ತಿಳಿಸಿದಂತೆ ಹಾಗೂ ಸರ್ ಎಂ.ವಿಶ್ವೇಶ್ವರಯ್ಯನವರ ಆಶಯದಂತೆ ಈ ಕಟ್ಟಡವನ್ನು ಸದರಿ ಟ್ರಸ್ಟಿನ ಆಡಳಿತದಲ್ಲಿ ಇಟ್ಟುಕೊಳ್ಳಲಾಗಿದೆ.

ಈ. ಸರ್ ಎಂ. ವಿಶ್ವೇಶ್ವರಯ್ಯರವರು ಜನಿಸಿದ ಮನೆಯ ಒಂದು ಕೊಠಡಿಯಲ್ಲಿ ಕಟ್ಟಡ ಸ್ವಚ್ಛತೆಗೊಳಿಸುವ ಉಪಕರಣಗಳನ್ನು ಇಟ್ಟುಕೊಂಡಿರುತ್ತಾರೆ. ಉಗ್ರಾಣವನ್ನಾಗಿ ಮಾಡಿರುವುದಿಲ್ಲ.

ಉ. ಇವುಗಳನ್ನು ಬೇರೆ ಸ್ಥಳಕ್ಕೆ ವರ್ಗಾಯಿಸಲು ಸಂಬಂಧಿಸಿದವರಿಗೆ ಕೋರಲಾಗಿದೆ.

ಊ. ಈಗಾಗಲೇ ಈ ಕಟ್ಟಡಗಳು ವಿಶ್ವೇಶ್ವರಯ್ಯ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ಸುಪರ್ದಿಯಲ್ಲಿರುವುದರಿಂದ ಇವುಗಳನ್ನು ರಾಷ್ಟ್ರೀಯ ಸ್ಮಾರಕವನ್ನಾಗಿ ಪರಿವರ್ತಿಸುವ ಅವಶ್ಯಕತೆ ಇರುವುದಿಲ್ಲ. ಹೀಗಾಗಿ ಸರ್ಕಾರವು ಈ ಕಟ್ಟಡಗಳ ಕುರಿತು ಕ್ರಮ ತೆಗೆದುಕೊಳ್ಳುವ ಅವಶ್ಯಕತೆ ಇರುವುದಿಲ್ಲ.

ಋ. ಉದ್ಭವಿಸುವುದಿಲ್ಲ.